ಇದನ್ನು ಇತ್ಯರ್ಥಗೊಳಿಸಲು ಪ್ರಯತ್ನ ಮಾಡುತ್ತೇನೆ. ಇದು ಆಗದೇ ಇದ್ದಲ್ಲಿ, ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದುಕೊಂಡು, ಮುಂದಿನ ಹಂಗಾಮಿನೊಳಗಾಗಿ ಆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮುಖಾಂತರ ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರುವುದು.

(ಸದನವು, ಮಧ್ಯಾಹ್ನ 1 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸಭೆಯು 3.35 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು)

ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನು ಅಲಂಕರಿಸಿದ್ದರು

ಗಮನ ಸೆಳೆಯುವ ಸೂಚನೆಗಳು (ಮುಂದುವರಿದುದು)

ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸನ್ಮಾನ್ಯ ಅಧ್ಯಕ್ಷರೆ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ತುಂಗಾ ಮೇಲ್ದಂಡೆ ಯೋಜನೆ ಮುಗಿಸುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : ತುಂಗ ಮೇಲ್ದಂಡೆ ಯೋಜನೆಗೆ ರೂ.670 ಕೋಟಿಗಳ ಪರಿಷ್ಕೃತ ಅಂದಾಜು ತಯಾರಿಸಲಾಗಿದೆ. ಈ ಯೋಜನೆಗೆ2:98ರ ವರೆಗೆ ರೂ. 23.3 ಕೋಟಿ ವೆಚ್ಚವಾಗಿದ್ದು, ಈ ಯೋಜನೆಗೆ 12.34 ಟಿಎಂಸಿ ನೀರಿನ ಉಪಯುಕ್ತತೆ ಹೊಂದಿದ್ದು, ಬಚಾವತ್ ಆಯೋಗದ ತೀರ್ಪಿನ ಅನ್ವಯ 2000 ಇಸವಿಯೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ.

ಈ ಯೋಜನೆಯ ವರದಿಯನ್ನು ಅನುಮೋದನೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಪ್ರಸ್ತುತ ಕಾಲುವೆಯ 10 ಕಿ.ಮೀ. ವರೆಗಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 1,2, ಮತ್ತು 3 ಕಿ.ಮೀ.ಗಳಲ್ಲಿನ ಕಾಮಗಾರಿಗಳನ್ನು ಇಲ್ಲಿನ ಅರಣ್ಯ ಭೂಮಿಯನ್ನು ನೀರಾವರಿಗೆ ಹಸ್ತಾಂತರಿಸಿದ ನಂತರ ಮುಂದುವರಿಸಲಾಗುವುದು. ಯೋಜನೆಯ ಹೆಡ್ ವರ್ಕ್ಸ್ ಕಾಮಾಗಾರಿಗಳ ಅನುಮೋದನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ದಿನಾಂಕ 1-8-97ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಯೋಜನೆ ಅಡಿ ಬರುವ ಮಾನ್ಯ ಸಂಸತ್ ಸದಸ್ಯರು, ವಿಧಾನಸಭಾ ಸದಸ್ಯರು ಹಾಗೂ ವಿವಿಧ ಇಲಾಖೆಯ

ಅಧಿಕಾರಿಗಳೊಡನೆ ತುಂಗ ಮೇಲ್ದಂಡೆ ಯೋಜನೆ ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೊಂಡು2000 ಇಸವಿಯೊಳಗೆ ಪೂರ್ಣಗೊಳಿಸುವ ಸಲುವಾಗಿ ಈ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಲ್ಲಿನ ತೊಂದರೆಗಳನ್ನು ನಿವಾರಿಸಿ ಯೋಜನೆಯ ಪ್ರಗತಿಯನ್ನು ತ್ವರಿತಗೊಳಿಸುವ ಸಲುವಾಗಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಲು ತೀರ್ಮಾನಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ : ನೀಇ : 114 : ಎಂಎಂಎಂ 97 ದಿನಾಂಕ 9-9-97ರಲ್ಲಿ ರಚಿಸಲಾಯಿತು:-

1)	ಅಪರ ಮುಖ್ಯ ಕಾರ್ಯದರ್ಶಿಯವರು	ಅಧ್ಯಕ್ಷರು
2)	ಅಭಿವೃದ್ಧಿ ಆಯುಕ್ತರು	ಸದಸ್ಯರು
3)	ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	"
4)	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	"
5)	ಪ್ರಧಾನ ಕಾರ್ಯದರ್ಶಿ, ಅರಣ್ಯ ಇಲಾಖೆ	"
6)	ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ	"
7)	ಕಾರ್ಯದರ್ಶಿ, ನೀರಾವರಿ ಇಲಾಖೆ	"
8)	ಕಾರ್ಯದರ್ಶಿ, ಯೋಜನಾ ಇಲಾಖೆ	"
9)	ಕಾರ್ಯದರ್ಶಿ, ಪರಿಸರ ಇಲಾಖೆ	"

ಈ ಸಮಿತಿಯು ಈ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಬೇಕಾದ ಎಲ್ಲ ಕ್ರಮಗಳ ಬಗ್ಗೆ ಹಾಗೂ ಸಂಪನ್ಮೂಲ ಕ್ರೋಢೀಕರಿಸುವ ಬಗ್ಗೆಯೂ ಸರ್ಕಾರಕ್ಕೆ ಸಲಹೆ ನೀಡುವಂತೆ ಸೂಚಿಸಲಾಗಿದ್ದು, ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

1998-99ನೇ ಸಾಲಿನಲ್ಲಿ ರೂ. 4.5 ಕೋಟಿಗಳ ಅನುದಾನ ಒದಗಿಸಲಾಗಿದೆ. ಆದಾಗ್ಯೂ ಮಧ್ಯಂತರ ಪ್ರಗತಿ ಸಮೀಕ್ಷೆ ನಡೆಸಿ ಹೆಚ್ಚಿನ ಹಣ ಒದಗಿಸುವ ಬಗ್ಗೆ ಸರ್ವ ಪ್ರಯತ್ನ ಮಾಡಲಾಗುವುದು. ವಿದೇಶಿ ನೆರವು ಹಾಗೂ ವಿವಿಧ ಮೂಲಗಳಿಂದ ಸಾಲ ದೊರಕಿಸಿಕೊಳ್ಳುವ ಬಗ್ಗೆಯೂ ಸಹ ಪರಿಶೀಲಿಸಲಾಗುವುದು. ಈ ಕಾಮಗಾರಿಯನ್ನು 2000 ಇಸವಿಯೊಳಗೆ ಪೂರ್ಣಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

+ಶ್ರೀ ಯು.ಬಿ. ಬಣಕಾರ್ : ಬಹುಶಃ ಈ ರಾಜ್ಯದ ಅತಿ ದುರ್ದೈವದ ಒಂದು ಯೋಜನೆ ಎಂದರೆ ತುಂಗಾ ಮೇಲ್ದಂಡೆ ಯೋಜನೆ ಎಂದು ಹೇಳಬಹುದು. ಏಕೆಂದರೆ 26 ವರ್ಷಗಳ ಹಿಂದೆ ಪ್ರಾರಂಭವಾದ ಇದು ಇವತ್ತಿನವರೆಗೂ ಒಂದು ಸ್ಪಷ್ಟವಾದ ರೂಪ ಪಡೆಯಲಾಗಲಿಲ್ಲ. 6 ತಿಂಗಳ ಹಿಂದೆ ನೀರಾವರಿ ಸಚಿವರು ಶಿವಮೊಗ್ಗದಲ್ಲಿ ಸಭೆ ಕರೆದಾಗ ಈಗಿರುವ ಅಣೆಕಟ್ಟಿನ ಮೇಲೆ 16 ಅಡಿ ಕ್ರಷ್‌ಗೇಟ್ ಏರಿಸಬೇಕೆಂಬುದು ನಿನಿತ್ತು ಅದನ್ನು ಬಿಟ್ಟು ನೂರು ಮೀಟರ್ ಕೆಳಗೆಹೊಸ ಅಣೆಕಟ್ಟು ಕಟ್ಟಿ ಅದರ ಮೇಲೆ 14 ಅಡಿ ಕ್ರಷ್‌ಗೇಟ್ ಕೂರಿಸುತ್ತೇವೆ ಎಂದು ಹೇಳಿದರು. ಆದ್ದರಿಂದ ಈ ಯೋಜನೆಯ

ಸ್ವರೂಪವೇನು ಎಂಬುದನ್ನು ಮುಂಚೆ ಅವರು ತಿಳಿಸಬೇಕು. ಎರಡನೆಯದು, ನೂತನ ಹಾವೇರಿ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಹಿರೇಕೆರೂರು, ಹಾವೇರಿ, ಹಾನಗಲ್, ಮತ್ತು ರಾಣೆಬೆನ್ನೂರು ಮತ್ತು ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಹೊನ್ನಾಳಿ ಹಾಗೂ ದಾವಣಗೆರೆ ಜಿಲ್ಲೆಯ ಹರಿಹರಕ್ಕೆ ಸುಮಾರು 7.34 ಲಕ್ಷ ಎಕರೆಗೆ ನೀರೊದಗಿಸುವ ಈ ಯೋಜನೆ ಬಗ್ಗೆ ಇನ್ನೂ ಸರ್ಕಾರ ಮೀನಮೇಷ ಮಾಡುತ್ತಿದೆ. ಕಳೆದ ವರ್ಷ 10 ಕೋಟಿ ರೂ. ಇಟ್ಟಿದ್ದರು. ಅದರಲ್ಲಿ 5 ಕೋಟಿ ರೂ. ಬಿಡುಗಡೆ ಮಾಡಿ ಸುಮಾರು 8 ಕೋಟಿ ರೂ. ಗಳಷ್ಟು ಮಾತ್ರ ಖರ್ಚು ಮಾಡಿದ್ದಾರೆ. ಈ ವರ್ಷ ಹೋದವರ್ಷಕ್ಕಿಂತ ಕಡಿಮೆ, ಎರಡು ಸಾವಿರ ವರ್ಷದೊಳಗೆ ಮುಗಿಯಬೇಕಾದ ಯೋಜನೆಯಿದು, ಇನ್ನು ಎರಡು ವರ್ಷದಲ್ಲಿ ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಅಥವಾ ಆಗುತ್ತದೋ ಇಲ್ಲವೋ ಎಂಬುದನ್ನು ಸ್ಪಷ್ಟಮಾಡಿಸಬೇಕು. ಏಕೆಂದರೆ ಈ ಏಳು ತಾಲ್ಲೂಕುಗಳೇನಿವೆ ಹೊನ್ನಾಳಿ ಶಿವಮೊಗ್ಗ ಮತ್ತು ಹರಿಹರ ಬಿಟ್ಟರೆ, ಹಿರೆಕೆರೂರು ರಾಣೆಬೆನ್ನೂರು ಹಾನಗಲ್ ಹಾವೇರಿ ಏನಿವೆ ಇವು ಕೇವಲ ಮಳೆಯ ಮೇಲೇ ಅವಲಂಬಿತವಾದ ಪ್ರದೇಶ. ಆದ್ದರಿಂದ ರೈತರು ಬಹಳ ಆಸೆಗಣ್ಣಿನಿಂದ ಈ ಯೋಜನೆ ಕಡೆ ನೋಡುತ್ತಿದ್ದಾರೆ. ಆದ್ದರಿಂದ ಈ ಯೋಜನೆಯ ಸ್ವರೂಪವನ್ನು ಮೊದಲು ಬಯಲುಮಾಡಿರಿ. ಇನ್ನೂ ಎರಡು ವರ್ಷವಿದೆ ಈ ಯೋಜನೆ ಮುಗಿಯಲಿಕ್ಕೆ. ತಾವು ಈ ಹಿಂದೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಿರಿ. ಅದರ ಪ್ರಕಾರ 31-3-97ರೊಳಗಾಗಿ ಶಿವಮೊಗ್ಗ, ಹೊನ್ನಾಳಿ, ಹಿರೇಕೆರೂರು ಹರಿಹರ ಮತ್ತು ರಾಣೆಬೆನ್ನೂರು ತಾಲ್ಲೂಕಿನ 18 ಸಾವಿರ ಎಕರೆ 31-3-98ರೊಳಗೆ ಅಂದರೆ ಇನ್ನು 7 ದಿವಸ ಉಳಿಯಿತು, ಹಿರೇಕೊರೂರು, ರಾಣೆಬೆನ್ನೂರು ತಾಲ್ಲೂಕುಗಳ 18 ಸಾವಿರ ಎಕರೆ ಅಂದರೆ ಇನ್ನೂ 7 ದಿವಸದೊಳಗೆ ಸುಮಾರು 36 ಸಾವಿರ ಹೆಕ್ಟೇರ್ ಜಮೀನು ನೀರಾವರಿಕ್ಷೇತ್ರ ಆಗಬೇಕಾಗಿತ್ತು. ಇಲ್ಲಿಯವರೆಗೆ ನಿಮಗೆ ಮೂರು ಕಿಮೀ ಕಾಲುವೆ ತೋಡುವುದಕ್ಕೆ ಆಗಲಿಲ್ಲ. ಕಳೆದ ಒಂದೂವರೆ ವರ್ಷದಿಂದ ಒಂದೇ ಉತ್ತರಕೊಡುತ್ತಾ ಬಂದಿದ್ದೀರಿ, ಏನೆಂದರೆ ಒಂದು ಎರಡು ಮತ್ತು ಮೂರು ಕಿಮೀಗಳ ಕಾಮಗಾರಿಗಳನ್ನು ಇಲ್ಲಿನ ಅರಣ್ಯ ಭೂಮಿಯನ್ನು ನೀರಾವರಿಗೆ ಹಸ್ತಾಂತರಿಸಿದ ನಂತರ ಮುಂದುವರೆಸಲಾಗುವುದು ಎಂದು. ತಾವು ಹೈಪವರ್ ಕಮಿಟಿ ಮಾಡಿದಿರಿ, ಪ್ರತಿತಿಂಗಳೂ ಈ ಕಮಿಟಿ ಸಭೆ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿರಿ. ಆದರೆ ಹಾಗೆ ಆಗಲಿಲ್ಲ. ಆದ್ದರಿಂದ ನಿರ್ದಿಷ್ಟವಾಗಿ ಎರಡು ಸಾವಿರ ವರ್ಷದೊಳಗೆ ಈ ಯೋಜನೆ ಮುಗಿಸಲು ತಾವು ಯಾವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ? ಕೇವಲ ನಾಲ್ಕೂವರೆ ಕೋಟಿ ಕೊಟ್ಟರೆ ಸಾಲುವುದಿಲ್ಲ, 200 ಕೋಟಿಗಳನ್ನಾದರೂ ಈ ವರ್ಷ ಅದಕ್ಕೆ ನಿಗದಿಮಾಡಬೇಕೆಂದು ತಮ್ಮಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು (ಸವಣೂರು) : ಉಪಾಧ್ಯಕ್ಷರೇ, ಈಗಾಗಲೇ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಶ್ರೀ ಬಣಕಾರ್‌ರವರು ನೀರಾವರಿ ಸಚಿವರ ಗಮನ ಸೆಳೆದಿದ್ದಾರೆ. ಈ ವಿಚಾರವಾಗಿ ಕಳೆದ ವಿಧಾನ ಸಭೆ ಅಧಿವೇಶನದಲ್ಲಿ ನಾನು ಅರ್ಧ ಗಂಟೆ ಕಾಲ ಚರ್ಚೆ ಮಾಡಿ ಯಾವತ್ತೂ ಸಂಪೂರ್ಣ ವಿಷಯದ ಬಗ್ಗೆ ನೀರಾವರಿ ಸಚಿವರ ಗಮನ ಸೆಳೆದಿದ್ದೆನು. ಆದಾಗ್ಯೂ ಈ ಯೋಜನೆಗೆ ಈ ವರ್ಷ ಕೇವಲ 4 ಕೋಟಿಗಳನ್ನು ಆಯವ್ಯಯದಲ್ಲಿ ನಿಗದಿಪಡಿಸಿದ್ದಾರೆ. ಇದರಿಂದ ಏನನ್ನಿಸುತ್ತದೆ ಅಂದರೆ ಮೊಸಳೆಕಣ್ಣೀರು ಒರೆಸುವ ರೀತಿಯಲ್ಲಿ ಸರ್ಕಾರ ಇದನ್ನು ಮಾಡಬಾರದೆಂಬ

ಉದ್ದೇಶದಿಂದ ಈ ರೀತಿ ಹಣ ಒದಗಿಸುತ್ತಿದ್ದಾರೇನೋ ಎಂದು ನಾವು ಕೇಳಬೇಕಾಗಿದೆ. ಒದಗಿಸಿದ ಹಣವನ್ನೂ ಖರ್ಚು ಮಾಡುತ್ತಾ ಬಂದಿರುವುದಿಲ್ಲ. 91-92 ರಿಂದ 97-98ರವರೆಗೆ ಏಳೆಂಟು ವರ್ಷ ಕಾಲ ಯೋಜನೆ ಇಂಪ್ಲಿಮೆಂಟ್ ಆಗಲಿಲ್ಲ. ಆ ಕಾರಣ ಕನಿಷ್ಟ ಎರಡು ನೂರು ಕೋಟಿ ರೂಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ನನ್ನದು ಒಂದೇ ವಿನಂತಿ. ಈ ಯೋಜನೆಗಾಗಿ ಶಿವಮೊಗ್ಗದಿಂದ ತೀರ್ಥಹಳ್ಳಿ ರಸ್ತೆ ಹಾಳುಬಿಟ್ಟಿದ್ದಾರೆ. ನೀವು ಮಾಡುವುದೂ ಇಲ್ಲ, ಲೋಕೋಪಯೋಗಿ ಇಲಾಖೆಯವರು ದುರಸ್ತಿ ಮಾಡುತ್ತಿಲ್ಲ. ಈ ಯೋಜನೆ ಆಗುತ್ತದೋ ಅನ್ನುವುದು ಬೇರೆ ಪ್ರಶ್ನೆ. ದಯಮಾಡಿ ಇದನ್ನು ರಿಪೇರಿ ಮಾಡಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ : ಉಪಾಧ್ಯಕ್ಷರೇ, ಅವರು ಮೂಲಭೂತವಾಗಿ ಇದರ ಮೂಲ ಸ್ವರೂಪವೇನು ಎಂದು ಕೇಳಿದ್ದಾರೆ. ಒಂದು ಸಾರಿ ಅವರು ಮಾಲತಿಡ್ಯಾಂ ಬಗ್ಗೆ ಪ್ರಸ್ತಾಪ ಮಾಡಿದಾಗ ನಾನು ಸ್ಪಷ್ಟವಾಗಿ ಹೇಳಿದ್ದೆ. ದುರ್ದೈವ ನಮ್ಮ ರಾಜ್ಯದಲ್ಲಿ, ಕೆಲವು ನಿವೃತ್ತ ಇಂಜಿನಿಯರುಗಳು ಅವರು ಅಧಿಕಾರದಲ್ಲಿದ್ದಾಗ ಸರಿಯಾಗಿ ತಾಂತ್ರಿಕ ವಿವರಗಳನ್ನು ಸರ್ಕಾರಕ್ಕೆ ಮುಟ್ಟಿಸಲು ವಿಫಲವಾಗಿ ಹೊರಗಡೆ ಹೋದಮೇಲೆ ಎಲ್ಲಿ ಬೇಕಾದರೂ ಏನು ಬೇಕಾದರೂ ತಾಂತ್ರಿಕಸಲಹೆಯನ್ನು ಕೊಡುವ ನೈಪುಣ್ಯತೆ ಗಳಿಸಿಕೊಂಡಿದ್ದಾರೆ. ಅವರದ್ದು ಕೇಳಿಬಿಟ್ಟರೆ ನನಗೆ ಬಹಳ ಆಶ್ಚರ್ಯವಾಗಿಬಿಡುತ್ತದೆ ಅವರು ಸರ್ಕಾರದಲ್ಲಿದ್ದಾಗ ಏನೇನು ಹೇಳುತ್ತಿದ್ದರು, ಹೊರಗಡೆ ಏನೇನು ಹೇಳುತ್ತಾರೆ ಎಂದು ಏನಾದರೂ ಹೇಳಿಕೊಂಡು ಹೋಗಲಿ, ಮಾನ್ಯ ಬಣಕಾರ್ ಅವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಇಂತಹ ಸೂಕ್ಷ್ಮ ವಿಚಾರಗಳನ್ನು ಚೆನ್ನಾಗಿ ನಾವು ಅಧ್ಯಯನ ಮಾಡಿಕೊಳ್ಳಬೇಕು, ನನಗೆ ಟೆಕ್ನಿಕಲ್ ಕಮಿಟಿಗಳಿವೆ ಐದೂ ಆರು ಜನ ಚೀಫ್ ಇಂಜಿನಿಯರ್ಸ್, ರಿಟೈರ್ಡ್ ಚೀಫ್ ಇಂಜಿನಿಯರ್ಸ್, ಸರ್ಕಾರದಲ್ಲಿ ರೆಕಗ್‌ನೈಸ್ ಆಗ ಬೋರ್ಡ್ ಇದೆ, ಸೆಕ್ರೆಟರೀನೂ ಟೆಕ್ನಿಕಲ್ ಹ್ಯಾಂಡ್ - ಎಲ್ಲಾ ಸೇರಿ ಸ್ಟಡಿ ಮಾಡಿರುವುದರಲ್ಲಿ ಈಗಿರತಕ್ಕಂತಹ ಗಾಜನೂರು ಅಣೆಕಟ್ಟು ಲೆವೆಲ್ ಏನಿದೆ ಅದರಿಂದ 1930 ಫೀಟ್ ಲೆವೆಲ್‌ಗೆ ನಾವು ಪ್ರಪೋಸ್ಡ್ ಡ್ಯಾಂ ಮಾಡುತ್ತಿದ್ದೇವೆ. ಅಂದರೆ 13.75 ಫೀಟ್ ಇನ್‌ಕ್ರೀಸ್ ಮಾಡುತ್ತಿದ್ದೇವೆ. ಇದರ ಬಗ್ಗೆ ಟೆಕ್ನಿಕಲ್ ಕಮಿಟಿಯವರು ಸಾಕಷ್ಟು ಸ್ಟಡಿ ಮಾಡಿ, ಸುಮಾರು ಏಳೆಂಟು ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿತ್ತು, ಈಗಿರುವ ಗಾಜನೂರು ಅಣೆಕಟ್ಟಿನಿಂದ ನೂರು ಅಡಿ ಕೆಳಗಡೆ ಒಂದು ಡ್ಯಾಂ ಪ್ರಪೋಸ್ ಮಾಡಿ ಅದರ ಎಫ್‌ಆರ್‌ಎಲ್ 1930 ಎಂದು ಲೆಕ್ಕಹಾಕಿ ಬಂದಗದ್ದೆವರೆಗೆ ಯಾವುದೇ ವಿಧವಾದ ಮುಳುಗಡೆ ಇಲ್ಲದೇನೇ ಮಾಡಲಾಗುವುದು, ಬಚಾವತ್‌ನಲ್ಲಿ 12.2 ಎಂದು ಏನಿಟ್ಟಿದ್ದಾರೆ, ಅದರಲ್ಲಿ ನೀರಾರವಿಗೆಂದು 339 ಕಿಮೀ ಕೆನಾಲ್, 2.34 ಲಕ್ಷ ಹೆಕ್ಟೇರ್ ನೀರಾವರಿಗೆ, ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ ತಾಲ್ಲೂಕು, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಹರಿಹರ ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ, ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ, ಹಾನಗಲ್ ತಾಲ್ಲೂಕು ಸೇರಿ 2.34 ಲಕ್ಷ ಹೆಕ್ಟೇರಿಗೆ ಖರೀಫ್ ಬೆಳೆಗೆ ನೀರು ಕೊಡಬೇಕೆಂಬ ಪ್ರಪೋಸ್ಡ್ ಯೋಜನೆ ಮಾಡಿದ್ದೇವೆ. ಮೂಲದ ಸ್ಪಷ್ಟಸ್ವರೂಪ ಕೊಡಿರಿ ಎಂದು ಕೇಳಿದರು. ನೂರಡಿ ಕೆಳಗಡೆ,

ಸುಮಾರು 85 ಕೋಟಿ ಅಂದಾಜಿನ ಮೇಲೆ 1930 ಎಫ್‌ಆರ್‌ಎಲ್ ಇಟ್ಟು ಡ್ಯಾಂ ರೈಸ್ ಮಾಡುತ್ತಿದ್ದೇವೆ ಅದು ಕೇವಲ ಡೈವರ್ಶನ್, ಅವರ ತಂದೆ ಬಣಕಾರ್‌ರವರು ಒಂದು ಕಾಗದ ಬರೆದಿದ್ದರು, ಅದರ ಬಗ್ಗೆ ನಾನು ಸುಧೀರ್ಘವಾಗಿ ಉತ್ತರ ಬರೆದಿದ್ದೇನೆ. ಇದು ಕರೆಕ್ಟಾಗಿದೆ ಎಂದು ತಿಳಿದುಕೊಳ್ಳಬೇಕು. 330 ಕಿಮೀ ಕೆನಾಲ್ ತೆಗೆಯುವುದಕ್ಕೆ ಟೆಕ್ನಿಕಲ್ ಕಮಿಟಿ, ಎಂಐಸಿ ಬೋರ್ಡ್ ಎಲ್ಲಾ ಒಪ್ಪಿದ್ದಾರೆ. ಮುಂದಿನ ಸಚಿವಸಂಪುಟದಲ್ಲಿ ಅನುಮತಿ ಪಡೆದುಕೊಂಡು ಡ್ಯಾಂ ಕೆಲಸ ಶುರು ಮಾಡುತ್ತೇವೆ. ಇನ್ನು ಕೆನಾಲ್‌ದು. ಒಟ್ಟು ಸುಮಾರು 55 ಕಿಮೀಗೆ ನಾವು ಸರ್ವೆ ಎಲ್ಲಾ ಮುಗಿಸಿದ್ದೇವೆ. ಅಂದಾಜು ಮುಗಿಸಿದ್ದೇವೆ. 35 ರಿಂದ 45 ಕಿಮೀವರೆಗೆ ಟೆಂಡರ್ಸ್ ಸಹ ಕರೆದಿದ್ದೇವೆ. ಒಂದು ಮತ್ತು ಎರಡು ಕಿಮೀ ಮಾತ್ರ ಅರಣ್ಯ ಕ್ಲಿಯರೆನ್ಸ್ ಬರಬೇಕಾಗಿತ್ತು. ಅದು ಪಡೆಯಲು, ಅವರಿಗೂ ಗೊತ್ತಿದೆ, ಸಾಕಷ್ಟು ಹೋರಾಟ ಮಾಡಲಾಗಿದೆ. ಅದು ಬಂದ ಕೂಡಲೇ ಅದನ್ನು ಸ್ಟಾರ್ಟ್ ಮಾಡುತ್ತೇವೆ. ಮೂರನೆಯದು, ಅವರು ಕೇಳಿದ್ದು ಹಣ ಇಟ್ಟಿಲ್ಲ ಎಂದು. ಆ ಭಾಗದಲ್ಲಿರುವ ಎಲ್ಲಾ ಸಚಿವರು ಹಿರಿಯ ನಾಯಕರು, ಅದಕ್ಕೆ ಹೋರಾಟ ಮಾಡುತ್ತಿರುವ ಸಮಿತಿಯವರೆಲ್ಲ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಫೈನಾನ್ಸ್ ಕಮೀಶನರ್, ಚೀಫ್ ಸೆಕ್ರೆಟರಿಗಳೆಲ್ಲಾ ಸೇರಿ ಒಂದು ಕಮಿಟಿ ಮಾಡಿದ್ದೇವೆ. ಮೊನ್ನೆ ಕೂಡ ಅದರ ಒಂದು ಸಭೆ ಮಾಡಿದ್ದೇವೆ. ಯಾವ ರೀತಿ ಫೈನಾನ್ಸನ್ನು ಹೊಂದಿಸಿಕೊಳ್ಳಬೇಕು ಅನ್ನುವ ಬಗ್ಗೆ ಆಲೋಚನೆ ಮಾಡಿದ್ದೇವೆ. ಆ ಫೈನಾನ್ಸ್ ರಿಸೋರ್ಸಿನ ಪ್ರಪೋಸಲ್ಸ್ ಬಂದ ಮೇಲೆ ಸಚಿವಸಂಪುಟದಲ್ಲಿಟ್ಟು ಹಣ ಸಂಗ್ರಹಣೆ ಯಾವರೀತಿ ಮಾಡಬೇಕು. ಎರಡು ವರ್ಷದಲ್ಲಿಯಾವರೀತಿ ಕಂಪ್ಲೀಟ್ ಮಾಡಬೇಕು, ಅತ್ಯಗತ್ಯವಾಗಿ ಎಷ್ಟು ಹಣ ಬೇಕೆಂಬ ಬಗ್ಗೆ ಸಮಿತಿ ವರದಿ ಬಂದ ಕೂಡಲೇ ಈ ಕೆಲಸವನ್ನು ತ್ವರಿತವಾಗಿ ಜಾರಿಗೊಳಿಸಲು ಪ್ರಯತ್ನಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ಜಿಲ್ಲಾ ರೌಡಿ ನಿಗ್ರಹ ದಳದ ಪೋಲೀಸರು ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವುದು.

ಶ್ರೀ ಕೆ. ಅಮರನಾಥ ಶೆಟ್ಟಿ (ಮೂಡಬಿದರೆ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ದರೋಡೆಕೋರನಾದ ಬಾಲಕೃಷ್ಣಶೆಟ್ಟಿಯನ್ನು ಜಿಲ್ಲಾ ರೌಡಿ ನಿಗ್ರಹ ದಳದ ಪೊಲೀಸರು ಬಂಧಿಸಿ ಆತನಿಂದ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ನಾನು ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ,

ದಿನಾಂಕ :13-3-98ರಂದು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ನೀಡೋಡಿ ಗ್ರಾಮದ ಕುಖ್ಯಾತ ಅಪರಾಧಿ ಬಾಲಕೃಷ್ಣ ಶೆಟ್ಟಿ ಉರುಫ್ ಬಾಸ್ಕರಶೆಟ್ಟಿ ಉರುಫ್ ಬಾಲಣ್ಣ 29 ವರ್ಷ ಎಂಬುವವರನ್ನು ದ.ಕ. ಜಿಲ್ಲೆಯ ರೌಡಿ ಪ್ರತಿಬಂಧಕ ದಳ ಬಂಧಿಸಿರುತ್ತದೆ. ಪ್ರಕರಣದ ಸಂಕ್ಷಿಪ್ತ ವಿವರ ಈ ರೀತಿ ಇದೆ.

ಮಾಹಿತಿಯ ಆಧಾರದ ಮೇಲೆ ಪಿ.ಎಸ್.ಐ.ಕೆ.ಸಿ. ಅಶೋಕನ್ ಮತ್ತು ಇತರರನ್ನೊಳಗೊಂಡ ರೌಡಿ ಪ್ರತಿಭಂದಕ ದಳ, ದ.ಕ. ಜಿಲ್ಲೆ ಬಾಲಕೃಷ್ಣ ಶೆಟ್ಟಿಯ ಚಲನವಲನದ ಮೇಲೆ ತೀವ್ರ ನಿಗ ಇಟ್ಟಿದ್ದು,